ಶ್ರೀ ಕರಡಿ ಸಂಗಣ್ಣ ಅಮರಪ್ಪ :- 7,300 ಕಿ.ಮೀ. ವರೆಗೆ ರಸ್ತೆಯನ್ನು ಮಾಡುವಂಥ ಯೋಜನೆಯನ್ನು ಮಂತ್ರಿಯವರು ಕೈಗೆತ್ತಿಕೊಂಡಿದ್ದಾರೆ. ಇದು ಸ್ವಾಗತಾರ್ಹವಾದಂಥ ಒಂದು ಯೋಜನೆ. ಆದರೆ ನಮಗೆ ಏನು ಅನ್ಯಾಯವಾಗಿದೆ ಎಂದರೆ, ಉಡುಪಿ ಮತ್ತು ಕೊಪ್ಪಳ ಇವೆರಡು ಜಿಲ್ಲೆಗಳಲ್ಲಿ ರೀಸ್ಟ್ರಂತನಿಂಗ್‌ಅನ್ನು ಇವರು ಕೈಬಿಟ್ಟಿದ್ದಾರೆ. ಈ ಬಗ್ಗೆ ನಾನು ಹೋದ ಸಲವೂ ಪ್ರಶ್ನೆ ಹಾಕಿದ್ದೆ. ನೆಕ್ಸ್ಟ್ ಅದನ್ನು ತೆಗೆದುಕೊಳ್ಳುತ್ತೇವೆ ಎನ್ನುವ ಮಾತನ್ನು ಆಗ ಹೇಳಿದ್ದರು. ಆದರೆ ಅದು ಇನ್ನೂ ಕಾರ್ಯಗತವಾಗಿಲ್ಲ. ಅದಕ್ಕೆ ಸಚಿವರು ಉತ್ತರ ಕೊಡಬೇಕು. ಎರಡನೆಯದಾಗಿ, ವಿಶ್ವ ಬ್ಯಾಂಕ್ ಯೋಜನೆಯಡಿಯಲ್ಲಿ .....

ಅಧ್ಯಕ್ಷರು :- ಎರಡೆರಡು ಪ್ರಶ್ನೆಗಳನ್ನು ಕೇಳಲು ಅವಕಾಶವಿಲ್ಲ.

ಶ್ರೀ ಕರಡಿ ಸಂಗಣ್ಣ ಅಮರಪ್ಪ :- ಇದು ನಮ್ಮ ಕ್ಷೇತ್ರಕ್ಕೆ ಸಂಬಂಧಿಸಿದ್ದಾದ್ದರಿಂದ ಹೇಳುತ್ತಿದ್ದೇನೆ.

ಅಧ್ಯಕ್ಷರು :- ಮುಖ್ಯ ಪ್ರಶ್ನೆ ಕೇಳಿರುವವರು ಎರಡು ಪ್ರಶ್ನೆಗಳನ್ನು ಕೇಳಬಹುದು. ನೀವು ಕೇಳುವ ಹಾಗಿಲ್ಲ. ಈಗ ಮಾನ್ಯ ಚಲುವರಾಯಸ್ವಾಮಿಯವರು.

ಶ್ರೀ ಕರಡಿ ಸಂಗಣ್ಣ ಅಮರಪ್ಪ :- ಅಧ್ಯಕ್ಷರೇ, ದಯವಿಟ್ಟು ಒಂದು ನಿಮಿಷ ಅವಕಾಶಕೊಡಿ.

ಅಧ್ಯಕ್ಷರು :- ಆಗುವುದಿಲ್ಲ. ನಮ್ಮ ರೂಲ್ಸ್ ಪ್ರಕಾರ ಪ್ರಶ್ನೆ ಹಾಕಿರುವವರು ಎರಡು ಪ್ರಶ್ನೆಗಳನ್ನು ಕೇಳಬಹುದಷ್ಟೇ. ಈಗ ಮಾನ್ಯ ಚಲುವರಾಯಸ್ವಾಮಿಯವರು ಅವರು ಹೇಳುವುದನ್ನು ಬರೆದುಕೊಳ್ಳಬೇಡಿ.

ಶ್ರೀ ಕರಡಿ ಸಂಗಣ್ಣ ಅಮರಪ್ಪ :- ತಾವು ನಮ್ಮ ಸಹಾಯಕ್ಕೆ ಬರದಿದ್ದರೆ ಹೇಗೆ?

ಅಧ್ಯಕ್ಷರು :- ಅದಕ್ಕಾಗಿಯೇ ಹೇಳಿದ್ದು. ನಮ್ಮ ರೂಲ್ಸ್ ಪ್ರಕಾರ ತಾವು ಒಂದು ಪ್ರಶ್ನೆಯನ್ನು ಕೇಳಬಹುದಷ್ಟೇ. ಎರಡನೆಯದು ಆಗುವುದಿಲ್ಲ.

ಶ್ರೀ ಕರಡಿ ಸಂಗಣ್ಣ ಅಮರಪ್ಪ :- ತಾವು ಅವಕಾಶಕೊಡದಿದ್ದರೆ ನಾವು ಸಭಾತ್ಯಾಗ ಮಾಡಬೇಕಾಗುತ್ತದೆ.

ಅಧ್ಯಕ್ಷರು :- ತಾವು ಮುಖ್ಯ ಪ್ರಶ್ನೆಕಾರರಲ್ಲ.

(ಈ ಹಂತದಲ್ಲಿ ಸದಸ್ಯರಾದ ಕರಡಿ ಸಂಗಣ್ಣ ಅಮರಪ್ಪನವರು ಸಭಾತ್ಯಾಗ ಮಾಡಿದರು)

ಶ್ರೀ ಕೆ.ಎಂ. ಕೃಷ್ಣಮೂರ್ತಿ :- ಮಾನ್ಯ ಅಧ್ಯಕ್ಷರೇ, ನಾವೂ ಈ ಪ್ರಶ್ನೆಯನ್ನು ಕೇಳಿದ್ದೆವು. ಆದರೆ ಅದು ಅನ್-ಸ್ಟಾರ್ಡ್ ಆಗಿಬಿಟ್ಟಿದೆ.

ಅಧ್ಯಕ್ಷರು :- ಮಾನ್ಯ ಚಲುವರಾಯಸ್ವಾಮಿಯವರೇ, ನೀವು ಹೇಳಿ.

ಶ್ರೀ ಎನ್. ಚಲುವರಾಯಸ್ವಾಮಿ :- ಮಾನ್ಯ ಅಧ್ಯಕ್ಷರೇ, ನನ್ನ ಕ್ಷೇತ್ರದಲ್ಲಿ ಶ್ರೀರಂಗಪಟ್ಟಣ - ಬೀದರ್ ರಸ್ತೆ ಹಾದು ಹೋಗುತ್ತಿದೆ. ವಿಶ್ವಬ್ಯಾಂಕಿನ ಯೋಜನೆಯಡಿಯಲ್ಲಿ ಈಗಾಗಲೇ ಸಾಕಷ್ಟು ಕೆಲಸ ನಡೆಯುತ್ತಿದೆ. ಶ್ರೀರಂಗಪಟ್ಟಣದಿಂದ ಚಿನ್ಕ, ಚಿನ್ಕದಿಂದ ನೆಲ್ಲಿಗೆರೆ, ನೆಲ್ಲಿಗೆರೆಯಿಂದ ಕಿಬ್ಬನಹಳ್ಳಿ ಈ ಮೂರು ಪ್ಯಾಕೇಜನ್ನು ನನ್ನ ಕ್ಷೇತ್ರದ ವ್ಯಾಪ್ತಿಯಲ್ಲಿ ಕೈಗೆತ್ತಿಕೊಂಡಿದ್ದಾರೆ. ಈ ಮೂರು ಪ್ಯಾಕೇಜುಗಳನ್ನು ರಷ್ಯನ್ ಕಂಪನಿಗೆ ಕಾಂಟ್ರಾಕ್ಟ್ ಕೊಡಲಾಗಿದೆ ಎಂದು ಹೇಳಿದರು. ಇದು ನಿಜವೇ ಮತ್ತು ಇದರಲ್ಲಿ ಸಬ್-ಲೀಸ್ ಕೊಡಲು ಅವಕಾಶವಿದೆಯೇ? ಕೊಟ್ಟಿದ್ದರೆ, ಯಾರಿಗೆ ಸಬ್-ಲೀಸ್ ಕೊಟ್ಟಿದ್ದೀರಿ? ಇದರ ಸೂಪರ್‌ವಿಷನ್ ರಾಜ್ಯ ಸರ್ಕಾರದ ವ್ಯಾಪ್ತಿಗೆ